



ಬಾಲಿವುಡ್ ಭದ್ರಕೋಟೆಯ ಹೆಬ್ಬಾಗಿಲನ್ನೇ ಉಡೀಸ್ ಮಾಡಿದ ದಕ್ಷಿಣದ ಇಬ್ಬರು ನಿರ್ದೇಶಕರು ಪ್ರಶಾಂತ್ ನೀಲ್ ಮತ್ತು ರಾಜಮೌಳಿ

**'ಕೆಜಿಎಫ್' ಸರಣಿ ಚಿತ್ರಗಳ ನಾಯಕನ ಇಮೇಜಿಗೂ 'ದೀವಾರ್' ಹಿಂದಿ ಸಿನಿಮಾದ ಅಮಿತಾಭ್ ಬಚ್ಚನ್ ಇಮೇಜಿಗೂ ಸಾಮ್ಯವಿದೆ. ಭಾವುಕ ನೆಲೆಗಟ್ಟಿನಲ್ಲಿ ತಾಯಿಯ ಸೆಂಟಿಮೆಂಟಿನ ಕ್ಯಾಪ್ಸೂಲ್ ಒಳಗೆ ಕ್ರೌರ್ಯಕಥನದ ಪುಡಿಯನ್ನು ತುಂಬುವ ಜಾಯಮಾನವನ್ನು ಎರಡೂ ಚಿತ್ರಗಳಲ್ಲಿ ಕಾಣಬಹುದು.**







ದಕ್ಷಿಣದ ದಾಳಿಯನ್ನು ಎದುರಿಸಲು ಬಾಲಿವುಡ್ ಬಳಿ ಸದ್ಯಕ್ಕೆ ಇರುವ 'ಬ್ರಹ್ಮಾಸ್ತ್ರ' ಇದೊಂದೇ!

## 'ಪ್ಯಾನ್ ಇಂಡಿಯಾ ಎನ್ನದಿರಿ'

ಈಗ ದಕ್ಷಿಣ ಭಾರತದ ಚಿತ್ರಗಳನ್ನು 'ಪ್ಯಾನ್ ಇಂಡಿಯಾ' ಎಂದು ಕರೆಯುವುದನ್ನು ಕೇಳುತ್ತಿದ್ದೇವೆ, ಇಡೀ ಭಾರತದ ಪ್ರೇಕ್ಷಕರಿಗಾಗಿ ಹಲವು ಭಾಷೆಗಳಿಗೆ ಡಬ್ ಮಾಡಿ ಏಕಕಾಲದಲ್ಲಿ ಚಿತ್ರವನ್ನು ಬಿಡುಗಡೆ ಮಾಡುವ ಪ್ರಕ್ರಿಯೆಗೆ ಕೊಟ್ಟಿರುವ ಹೆಸರಿದು. ಇದನ್ನು ನಟ ಸುದೀಪ್ ಒಪ್ಪುವುದಿಲ್ಲ. 'ಹಿಂದಿಯವರು ಮಾಡಿದರೆ ಪ್ಯಾನ್ ಇಂಡಿಯಾ' ಸಿನಿಮಾ ಎಂದು ಹೇಳದೇ ಇರುವಾಗ ದಕ್ಷಿಣ ಭಾರತದ ಸಿನಿಮಾಗಳಿಗೆ ಮಾತ್ರ ಯಾಕೆ ಹಾಗನ್ನಬೇಕು. ಕನ್ನಡದ ಸಿನಿಮಾಗಳನ್ನು ಎಲ್ಲರೂ ನೋಡಿದರೆ ಅದು ಕೂಡ ಹಿಂದಿಯಂತೆ ಭಾರತದ ಚಿತ್ರವೇ ಅಲ್ಲವೇ' ಎನ್ನುವುದು ಅವರ ಅರ್ಥಪೂರ್ಣ ಪ್ರಶ್ನೆ. ದಕ್ಷಿಣ ಭಾರತದ ಸಿನಿಮಾಗಳು ಹಿಂದಿಗೆ ಡಬ್ ಆಗಿ ಚೆನ್ನಾಗಿ ಓಡುತ್ತಿವೆ. ಅದೇ ಹಿಂದಿ ಸಿನಿಮಾಗಳು ದಕ್ಷಿಣ ಭಾರತದ ಭಾಷೆಗಳಿಗೆ ಡಬ್ ಆದರೂ ಪರಿಣಾಮ ಅಷ್ಟಕ್ಕಷ್ಟೆ. ಇದನ್ನು ಕಂಡೇ ನಟ ಸಲ್ಮಾನ್ ಖಾನ್ ಹಿಂಗ್ಯಾಕಪ್ಪ ಎಂದು ಉಸಿರು ಹೊರಗೆ ಹಾಕಿದ್ದು.

ದಕ್ಷಿಣ ಭಾರತದ ಚಿತ್ರಗಳನ್ನು ಸದಾ ವಾರೆಗಣ್ಣಿನಿಂದ ನೋಡುತ್ತಾ ಬಂದಿದ್ದ ಹಿಂದಿ ಚಿತ್ರರಂಗಕ್ಕೆ ರಾಜಮೌಳಿ, ಸುಕುಮಾರ್ ಹಾಗೂ ಪ್ರಶಾಂತ್ ನೀಲ್ ಒಂದು 'ಶಾಕ್' ಅಂತೂ ಕೊಟ್ಟಿದ್ದಾರೆ. ಇದಕ್ಕೆ ಆ ಚಿತ್ರರಂಗದಿಂದ ಯಾವ ರೀತಿಯ ಉತ್ತರ ಬರುವುದೋ ನೋಡಬೇಕು.

ದಕ್ಷಿಣದ ಸವಾಲಿನಿಂದ ಚೇತರಿಸಿಕೊಂಡು ಬಾಲಿವುಡ್ ನಿರ್ಮಾತೃಗಳು ಮುಂದಿನ ದಿನಗಳಲ್ಲಿ ಅದ್ಭುತ ಸಿನಿಮಾಗಳನ್ನು ಸೃಷ್ಟಿಸಬಹುದು. ಆ ಸಿನಿಮಾಗಳು ಯಶಸ್ಸನ್ನೂ ಗಳಿಸಬಹುದು. ಆದರೆ, ಇನ್ನು ಮುಂದೆ ದಕ್ಷಿಣ ಭಾರತದ ಸಿನಿಮಾಗಳ ಬಗ್ಗೆ ಹಗುರವಾಗಿ ಮಾತನಾಡುವುದು ಇಲ್ಲವೇ ನಿರ್ಲಕ್ಷಿಸುವುದು ಬಾಲಿವುಡ್‌ಗೆ ಸಾಧ್ಯವಿಲ್ಲ. ಭಾರತೀಯ ಸಿನಿಮಾ ಎಂದರೆ ಹಿಂದಿ ಸಿನಿಮಾ ಮಾತ್ರ ಎನ್ನುವ ದಿನಗಳೂ ಮುಗಿದುಹೋದವು. ಆ ಮಟ್ಟಕ್ಕೆ ದಕ್ಷಿಣ ಭಾರತದ ಸಿನಿಮಾಗಳು ವಿಶ್ವ ಸಿನಿಮಾ ಪೇಟೆಯಲ್ಲಿ ತಮ್ಮ ಅಸ್ತಿತ್ವ ಕಂಡುಕೊಂಡಿವೆ.

ಪ್ರತಿಕ್ರಿಯಿಸಿ: feedback@sudha.co.in